**ಡಿಡಬ್ಲೂ.1: ಪಿ. ಶೇಷಾದ್ರಿ.,**

**ದಿನಾಂಕಃ 18.06.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲುಃ ದೂರುದಾರರ ಪರ ವಕೀಲರಿಂದಃ**

ಫಿರ್ಯಾದುದಾರರ ಕಂಪನಿಯ ಬಗ್ಗೆ ನನಗೆ ತಿಳಿದಿರುತ್ತದೆ. ಫಿರ್ಯಾದುದಾರರ ಕಂಪನಿಯಿಂದ ದಿಃ24-02-2020 ರಂದು ನಿಮ್ಮ ಖ-ತೆಗೆ 15,00,000/- ರೂಗಳು ವರ್ಗಾವಣೆಯಾಗಿರುತ್ತದೆ ಎಂದರೆ ಸರಿ. ಆ ವೇಳೆಯಲ್ಲಿ ನೀವು ಫಿರ್ಯಾದುದಾರರ ಕಂಪನಿಗೆ 10 ಚೆಕ್ಕುಗಳನ್ನು ನೀಡಿದ್ದೀರಿ ಎಂದರೆ ಸರಿ. ನಾನು ಮತ್ತು ಫಿರ್ಯಾದುದಾರರು 30 ವರ್ಷಗಳಿಂದ ಸ್ನೇಹಿತರಾಗಿದ್ದೇವು. ಫಿರ್ಯಾದುದಾರರು ಹಣ ಕಾಸಿನ ವ್ಯವಹಾರ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಲಾರಿ ಮುಖಾಂತರ ಸರಕು ಸಾಗಣಿಕೆ ಮಾಡುತ್ತಿದ್ದೆ ಎಂದು ಸಾಕ್ಷ್ಯ ನುಡಿದಿದ್ದು, ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ, ಅವಶ್ಯಕತೆ ಇದ್ದರೆ ದಾಖಲೆಯನುನ ಹಾಜರು ಪಡಿಸುತ್ತೇನೆ. ಸರಕುಗಳನ್ನು ಸರಬರಾಜು ಮಾಡಿದ ನಂತರ ಫಿರ್ಯಾದುದಾರರು ಹಣದ ಬದಲು ರಶೀದಿ ನೀಡುತ್ತಿದ್ದರು ಎಂದು ಸಾಕ್ಷ್ಯ ನುಡಿದಿದ್ದು ಆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ, ಸಾಕ್ಷಿಯು, ಆ ರಶೀದಿಯನ್ನು ಹಿಂದಿರುಗಿಸಿ ಹಣ ಪಡೆದುಕೊಂಡಿರುತ್ತೇನೆ. ಈ ರೀತಿಯ ವ್ಯವಹಾರ ನಡೆಯುತ್ತಿತ್ತು ಎಂದು ತೋರಿಸಲು ದಾಖಲೆ ಇರುತ್ತದೆಯೇ ಎಂದರೆ ದಾಖಲೆ ಇರುವುದಿಲ್ಲ. ಫಿರ್ಯದುದಾರರು ಕಮಿಷನ್ ಪಡೆಯುತ್ತಿದ್ದರು ಎಂದು ಸಾಕ್ಷ್ಯ ನುಡಿದಿದ್ದ, ಆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ, ದಾಖಲೆ ಇರುವುದಿಲ್ಲ. ನೀವು ಲಾರಿಗಳನ್ನು ಖರೀದಿ ಮತ್ತು ಮಾರಾಟ ಮಾಡುತ್ತಿದ್ದೇನು ಎಂದು ಸಾಕ್ಷ್ಯ ನುಡಿದಿದ್ದು ಆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ, ಸಾಕ್ಷಿಯು ದಾಖಲೆಗಳು ಇದೆ, ಹಾಜರುಪಡಿಸುತ್ತೇನೆ.

ಲಾರಿ ಮಾರಾಟದಿಂದ ಬಂದ ಲಾಭದಲ್ಲಿ ಫಿರ್ಯಾದುದಾರರಿಗೆ ಶೇಕಡಾ 20 ರಷ್ಟು

ಲಾಭಾಂಶ ನೀಡುತ್ತಿದ್ದೇನು ಎಂದು ಸಾಕ್ಷ್ಯ ನುಡಿದಿದ್ದು ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ, ಸಾಕ್ಷಿಯು ದಾಖಲೆಗಳು ಇಲ್ಲ ಎಂದು ಹೇಳುತ್ತಾರೆ. ನಾನು ಲಾರಿ ಖರೀದಿ ಮಾಡುವಾಗ ಫಿರ್ಯಾದುದಾರರ ಹಣ ಊಡಿಕೆ ಮಾಡುತ್ತಿದ್ದರು, ನಂತರ ಲಾರಿಯನ್ನು ಮಾರಾಟ ಮಾಡಿ ಬಂದ ಹಣದಿಂದ ಲಾಭಾಂಶ ನೀಡುತ್ತಿದ್ದೇನು ಎಂದು ಸಾಕ್ಷ್ಯ ನುಡಿದಿದ್ದು ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ, ಸಾಕ್ಷಿಯು ದಾಖಲೆಗಳು ಇಲ್ಲ ಎಂದು ಹೇಳುತ್ತಾರೆ. ಲಾರಿ ಖರೀದಿ ಮಾಡುವ ಮತ್ತು ಮಾರಾಟ ಮಾಡುತ್ತಿದ್ದ ವ್ಯವಹಾರದ ಬಗ್ಗೆ ಮಾಹಿತಿಯನ್ನು ಈ ಪ್ರಕರಣದಲ್ಲಿ ನಮ್ಮ ವಕೀಲರಿಗೆ ತಿಳಿಸಿರುವುದಿಲ್ಲ. ಲಾರಿ ವ್ಯವಹಾರವು ಉಳಿದ ಮೂರು ಪ್ರಕರಣಗಳಿಗೂ ಸಹ ಸಂಬಂಧಿಸಿರುವುದಿಲ್ಲ.

ನಿಪಿ.2 ರ ಬಗ್ಗೆ ನನಗೆ ತಿಳಿದಿರುತ್ತದೆ. ಆ ದಾಖಲೆಯ ಬಗ್ಗೆ ಯಾವುದೇ ತಕರಾರು ಇರುವುದಿಲ್ಲ. ನಿಪಿ.3 ಮತ್ತು 4 ರ ಚೆಕ್ಕುಗಳು ನನ್ನ ಖ-ತೆಗೆ ಸೇರಿರುತ್ತದೆ. ನಿಪಿ.7 ರ ನೋಟಿಸ್ ನನಗೆ ಜಾರಿಯಾಗಿರುತ್ತದೆ. ನೋಟಿಸ್ ನ ಬಗ್ಗೆ ನನಗೆ ತಿಳಿದಿರುತ್ತದೆ. ನೋಟಿಸ್ ಗೆ ನೀವು ಪ್ರತ್ಯುತ್ತರ ನೀಡಿಲ್ಲ ಎಂದರೆ ಸರಿಯಲ್ಲ, ಸಾಕ್ಷಿಯು ಮುಂದುವರಿದು ನಮ್ಮ ವಕೀಲರು ಪ್ರತ್ಯುತ್ತರ ನೀಡಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತ್ಯುತ್ತರದ ಪ್ರತಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು, ಟಿ ಎನ್ ರಘುಪತಿ ಎಂಬ ವಕೀಲರು ಪ್ರತ್ಯುತ್ತರ ನೀಡಿದ್ದು, ದಾಖಲೆಗಳು ಅವರ ಬಳಿ ಇದ್ದು, ಅವರು 2024-25 ರಲ್ಲಿ ಮರಣ ಹೊಂದಿರುತ್ತಾರೆ. ನಿಪಿ.7 ರ ನೋಟಿಸ್ ನನಗೆ ತಲುಪಿದಾಗ ಟಿ ಎನ್ ರಘುಪತಿ ವಕೀಲರು ಬದುಕಿದ್ದರು. ಅವರು ಅವರ ಜೀವಿತಾವದಿಯಲ್ಲಿ ಪ್ರತ್ಯುತ್ತರ ನೀಡಿದ ಬಗ್ಗೆ ದಾಖಲೆಯನ್ನು ಅವರಿಂದ ಪಡೆದುಕೊಂಡಿರುವುದಿಲ್ಲ.

ನಾನು ಬ್ಯಾಂಕ್ ನಿಂದ ಹಣ ಹಿಂಪಡೆದಿರುವ ಬಗ್ಗೆ ದಾಖಲಾತಿಗಾಗಿ ನಿಡಿ.1 ಅನ್ನು

ಹಾಜರುಪಡಿಸಿರುತ್ತೇನೆ. ಫಿರ್ಯಾದುದಾರರ ಕಛೇರಿಲ್ಲಿದ್ದ ತೇಜು ರಾಂಕರವರಿಗೆ ನಗದಾಗಿ ಹಣ ನೀಡಿದ್ದೇನು. ನಾನು ಅವರಿಗೆ ಹಣ ನೀಡುವ ಸಮಯದಲ್ಲಿ ನಾನು ಮತ್ತು ಅವರು ಇಬ್ಬರೇ ಇದ್ದೇವು. ನಾನು ದಿಃ26-02-2020 ರಂದು ತೇಜು ರಾಂಕರವರಿಗೆ 10 ಲಕ್ಷ ರೂಗಳನ್ನು ನೀಡಿದ್ದೇನು. ಸದರಿ ಹಣವನ್ನು ನೀಡಿರುವ ಬಗ್ಗೆ ರಶೀದಿ ಇದೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. 10 ಲಕ್ಷ ರೂಗಳನ್ನು ನಗದು ರೂಪದಲ್ಲಿ ಕೊಡುವಾಗ ರಶೀದಿಯನ್ನು ಕೇಳಿ ಪಡೆದುಕೂಂಡಿರಾ ಎಂಬ ಪ್ರಶ್ನೆಗೆ, ಆ ಸಮಯದಲ್ಲ್ಕಿ ಕಛೇರಿಯಲ್ಲಿ ಯಾರು ಇರದ ಕಾರಣ ನಾನು ಕೇಳಿ ಪಡೆದುಕೊಂಡಿರುವುದಿಲ್ಲ.

ದಿಃ25-02-2020 ರಂದು ಫಿರ್ಯಾದುದಾರರ ಖ-ತೆಯಿಂದ ನಿಮ್ಮ ಖಾತೆಗೆ 15 ಲಕ್ಷ ರೂ ಹಣ ಬಂದಿರುತ್ತದೆ ಎಂದರೆ ಸಾಕ್ಷಿಯು, Link field Private company Ltd ಕಂಪನಿಯ ಹೂಡಿಕೆಗಾಗಿ ಹಣ ಬಂದಿರುತ್ತದೆ ಎಂದು ನುಡಿಯುತ್ತಾರೆ. ಫಿರ್ಯಾದುದಾರರು ಕಂಪನಿಗೆ ಹಣ ಹೂಡಿಕೆ ಮಾಡಿದ್ದಾರೆ ಎಂದು ತೋರಿಸಲು ಯಾವುದೇ ದಾಖಲೆ ಇರುವುದಿಲ್ಲ. Link field Private company Ltd ಕಂಪನಿಗೂ Omkar investment ಗೂ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

ದಿ.25.02.2020 ರಂದು ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಪಿರ್ಯಾದುದಾರರು ನನಗೆ ಪೋನ್ ಮಾಡಿ ಈಗ ಎಲ್ಲಾ ಕಡೆ ಕೊರೊನಾ ವ್ಯಾಪಿಸುತ್ತಿರುವ ಕಾರಣ ನೀವು ನಿಮ್ಮ ಬಿಸಿನೆಸ್ ಅನ್ನು ಮುಂದುವರೆಸಬೇಡಿ ನಾನು ನೀಡಿದಂತಹ 15 ಲಕ್ಷ ರೂ. ಗಳನ್ನು ನಗದು ಮೂಲಕ ಹಿಂದಿರುಗಿಸಿ ಎಂದು ನನಗೆ ತಿಳಿಸಿದರು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ದಿಃ 25-02-2020 ರಂದು ಎಲ್ಲಾ ಕಡೆ ಕರೋನಾ ವ್ಯಾಪಿಸುತ್ತಿದ್ದು, ಲಾಕ್ ಡೌನ್‌ಗಳು ಆಗುತ್ತಿದ್ದು, ಎಲ್ಲಾ ವ್ಯಾಪಾರಗಳು ಸ್ಥಗಿತಗೊಂಡಿದ್ದವು. ದಿಃ 25-03-2020 ರಂದು

ಲಾಕ್ ಡೌನ್‌ಗಳು ಆಗಿದ್ದು ಎಂದರೆ ಅದು ನನಗೆ ಗೂತ್ತಿಲ್ಲ.

ವಿ. ರಾಧಕೃಷ್ಣನ್ ರವರನ್ನು ಮೊದಲನೆ ಬಾರಿಗೆ ಅವರ ಕಚೇರಿಯಲ್ಲಿ ನೋಡಿರುತ್ತೇನೆ. ಅವರು ಪಿರ್ಯಾದುದಾರರ ಜಿಪಿಎ ಹೋಲ್ಡರ್ ಆಗಿರುತ್ತಾರೆ. ಅವರನ್ನು ನಾನು 10 ವರ್ಷಗಳಿಂದ ನೋಡಿರುತ್ತೇನೆ. ಅವರು ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ರಾಧಕೃಷ್ಣನ್ ರವರು ಪಿರ್ಯಾದುದಾರರ ಲೆಕ್ಕ ಪತ್ರಗಳ ವ್ಯವಹಾರವನ್ನು ನೋಡಿಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಅವರ ಕಚೇರಿಗೆ ಹೋದಾಗ ರಾಧಕೃಷ್ಣನ್ ಕಚೇರಿಗೆ ಬಂದವರಿಗೆ ಕಾಫಿ-ಟೀ ಕೊಡುತ್ತಿದ್ದರು. ಆಗ ಅವರು ಯಾರು ಎಂದು ನಾನು ತಿಳಿದುಕೊಳ್ಳಲಿಲ್ಲ.

ಪಿರ್ಯಾದುದಾರರು ಹಾಜರುಪಡಿಸಿರುವ ದಾಖಲೆಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ನಿ.ಪಿ.1 ಜಿಪಿಎ ಆಗಿರುತ್ತದೆ. ಪಿರ್ಯಾದುದಾರರಿಗೆ 72 ವರ್ಷ ವಯಸ್ಸಾಗಿರುತ್ತದೆ ಎಂದರೆ ಇರಬಹುದು. 2020 ನೇ ಇಸವಿಯಲ್ಲಿ ಪಿರ್ಯಾದುದಾರರನ್ನು ಕೊನೆಯ ಬಾರಿಗೆ ಭೇಟಿ ಮಾಡಿದ್ದೇನೆ. ಪಿರ್ಯಾದುದಾರರ ಆರೋಗ್ಯದ ಬಗ್ಗೆ ನನಗೆ ಗೊತ್ತಿಲ್ಲ. ಅವರಿಗೆ ಅನಾರೋಗ್ಯವಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪಿರ್ಯಾದುದಾರರಿಗೆ ಅನಾರೋಗ್ಯವಿದ್ದ ಕಾರಣ ರಾಧಕೃಷ್ಣನ್ ರವರಿಗೆ ಜಿಪಿಎ ನೀಡಿರುತ್ತಾರೆ ಎಂದರೆ ಜಿಪಿಎ ನೀಡಿರುವ ಬಗ್ಗೆ ತಿಳಿದಿರುತ್ತದೆ, ಆದರೆ ಅವರ ಅನಾರೋಗ್ಯದ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

10 ಲಕ್ಷ ರೂ.ಗಳನ್ನು ಬ್ಯಾಂಕಿನಿಂದ ಹಿಂಪಡೆದು ರಾಧಕೃಷ್ಣನ್ ರವರಿಗೆ ಹಣ ನೀಡಿರುತ್ತೇನೆ ಎಂದು ಎಂದಿಗಾದರೂ ನಿಮ್ಮ ವಕೀಲರಿಗೆ ಮಾಹಿತಿ ನೀಡಿದ್ದೀರಾ ಎಂದರೆ ಮಾಹಿತಿ ನೀಡಿರುವುದಿಲ್ಲ ಎಂದು ನುಡಿಯುತ್ತಾರೆ. ಪಾಟೀ ಸವಾಲಿನಲ್ಲಿ ರಾಧಕೃಷ್ಣನ್ ರವರಿಗೆ 10 ಲಕ್ಷ ರೂ. ಹಣ ನೀಡಿರುತ್ತೇನೆ ಎಂದು ಪ್ರತಿಪಾದಿಸುತ್ತಿೀರಿ ಎಂದರೆ ನಮ್ಮ ವಕೀಲರ ತಪ್ಪಾಗಿರುತ್ತದೆ

**ಡಿಡಬ್ಲೂ.1: ಪಿ. ಶೇಷಾದ್ರಿ.,**

ಎಂದು ನುಡಿಯುತ್ತಾರೆ. 2020 ನೇ ಇಸವಿಯಿಂದ ನಾನು ತೆರಿಗೆ ಪಾವತಿದಾರನಾಗಿರುವುದಿಲ್ಲ. ನಿಮ್ಮ ಹಾಗೂ ಪಿರ್ಯಾದುದಾರರ ನಡುವೆ ವ್ಯವಹಾರಗಳಿದ್ದ ಬಗ್ಗೆ ದಾಖಲೆಗಳಿವೆಯೇ ಎಂದರೆ ಸಾಕ್ಷಿಯು ದಾಖಲೆಗಳಿರುವುದಿಲ್ಲ ಎಂದು ನುಡಿಯುತ್ತಾರೆ.

ಚೆಕ್ಕುಗಳು ದುರುಪಯೋಗವಾಗಿರುವ ಬಗ್ಗೆ ನಾನು ಪ್ರಕರಣ ದಾಖಲಿಸಿರುವುದಿಲ್ಲ. ಚೆಕ್ಕುಗಳನ್ನು ಹಿಂದಿರುಗಿಸಿ ಎಂದು ನಾನು ಲಿಖಿತವಾಗಿ ಕೋರಿಕೊಂಡಿರುವುದಿಲ್ಲ. 10 ಚೆಕ್ಕುಗಳಲ್ಲಿರುವ ಎಲ್ಲಾ ಸಹಿಗಳು ನಿಮ್ಮದಾಗಿರುತ್ತವೆ ಎಂದರೆ ಸರಿ. ಪಿರ್ಯಾದುದಾರರಿಗೆ 15 ಲಕ್ಷ ರೂ. ಹಣ ನೀಡುವ ಬಾದ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.